# ಕ.ರಾ.ರ.ಸಾ.ನಿಗಮ: ದಾವಣಗೆರೆ ವಿಭಾಗ: ದಾವಣಗೆರೆ

ಸಂ/ಕರಾಸಾ/ದಾವಿ/ವಿತದ/**1305/18-19** ದಿನಾಂಕ:**02-08-2018**

ಇ-ಟೆಂಡರ್ ಪ್ರಕಟಣೆ ಸಂಖ್ಯೆ : 01/2018-19
(ತನಿಖಾ ಕಾರ್ಯಕ್ಕೆ ಲಘು ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಪಡೆಯಲು)
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

*****

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ತನಿಖಾ ಕಾರ್ಯಕ್ಕಾಗಿ ಖಾಸಗಿ ವಾಹನ (ಕಾರು) ಗಳನ್ನು ತೆಗೆದುಕೊಳ್ಳುವ ಕುರಿತು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಕರೆಯಲಾಗಿದೆ. ಇ-ಟೆಂಡರ್ ವಿಧಾನ ನಿಭಂಧನೆಗಳು ಮತ್ತು ಅನುಸರಿಸಬೇಕಾದ ನಿಯಮಗಳು ಈ ಕೆಳಗಿನಂತೆ ಇರುತ್ತದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಾಹನಗಳು ರಾಜ್ಯ ಮತ್ತು ಅಂತರ ರಾಜ್ಯದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದು, ಸದರಿ ಮಾರ್ಗಗಳಲ್ಲಿ ತನಿಖಾ ಕಾರ್ಯಕ್ಕೆ ಕಾರುಗಳನ್ನು ಒದಗಿಸಬೇಕಾಗಿರುವ ಕಾರಣ ಕಾರುಗಳಿಗೆ ಅಂತರ ರಾಜ್ಯ ಪರವಾನಗಿಯನ್ನು ಹೊಂದಿರಬೇಕು (ಅಂದರೆ, ದಕ್ಷಿಣ ಭಾರತದ ರಾಜ್ಯಗಳಾದ ಮಹಾರಾಷ್ಟ್ರ, ಆಂದ್ರ ಪ್ರದೇಶ, ಗೋವಾ, ಕೇರಳ ಮತ್ತು ತಮಿಳುನಾಡು) ಕಾರುಗಳನ್ನು ಮೂರು ವರ್ಷದ ಅವಧಿಗೆ ಪಡೆಯಲಾಗುವುದು. ಹಳದಿ ಬೋರ್ಡ್ ಹೊಂದಿದ ಮತ್ತು 2015 ರ ನಂತರದ ಇತ್ತೀಚಿನ ಮಾದರಿಯ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುವುದು. ಪ್ರತಿ ಕಿ.ಮೀ.ಗೆ ಅತೀ ಕಡಿಮೆ ಬಾಡಿಗೆಗಾಗಿ ಬೇಡಿಕೆ ಸಲ್ಲಿಸುವ ಬೇಡಿಕೆದಾರರಿಗೆ **(The successful Licence shall be selected based on the lowest rate offered per k.m's, in the E-Quotation)** ಆದ್ಯತೆ ನೀಡಲಾಗುವುದು.

ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳನ್ನು ದಿನಾಂಕ:03/08/2018 ರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ ಇ-ಟೆಂಡರ್ ದಾಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ **"http://www.eproc.karnataka.gov.in"** ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು ಇ-ಟೆಂಡರ್‌ಗೆ ಭಾಗವಹಿಸುವವರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದ ನಿಗದಿತ ದಾಖಲಾತಿಗಳೊಂದಿಗೆ ದಿನಾಂಕ : 21-08-2018 ರಂದು ಸಮಯ 17-00ಘಂಟೆಯವರಗೆ ಅನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿರುತ್ತದೆ ಹಾಗೂ ಇ.ಪ್ರೋಕ್ಯೂರ್‌ಮೆಂಟ್‌ನಲ್ಲಿ ಅಪ್ ಲೋಡ್ ಮಾಡಿದ ಇ.ಎಂ.ಡಿ ಡಿ.ಡಿ, ಅರ್ಜಿ ಶುಲ್ಕ ಮತ್ತು ದಾಖಲಾತಿಗಳನ್ನು ವಿಭಾಗೀಯ ಸಂಚಾರ ಶಾಖೆಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ದಿನಾಂಕ:24.08.2018 ರ ಬೆಳಗ್ಗೆ 10.30ರ ಒಳಗಾಗಿ ಹಾಕುವುದು, ಇ-ಟೆಂಡರ್ ತೆರೆಯುವ ದಿ:24-08-2018 ರಂದು ಸಮಯ ಬೆಳಗ್ಗೆ 11-00 ಗಂಟೆಗೆ (ಯಾವುದೇ ತಾಂತ್ರಿಕ ದೊಷವಿಲ್ಲದಿದ್ದಲ್ಲಿ)

ಹೆಚ್ಚಿನ ವಿವರಗಳಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ, ದಾವಣಗೆರೆ - 577002 ಇವರಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ.

-: ಸಂಪರ್ಕಿಸುವ ದೂರವಾಣಿ ಸಂಖ್ಯೆ :-
ವಿಭಾಗೀಯ ಸಂಚಾರ ಅಧಿಕಾರಿ -7760990452
ಸಹಾಯಕ ಸಂಚಾರ ವ್ಯವಸ್ಥಾಪಕರು- 7760990461

-ಸಹಿ-
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾರಿಗೆ ನಿಗಮ:ದಾವಣಗೆರೆ

Scanned by CamScanner